


■ ವಸುಮತಿ ಉಡುಪ
ಕಲೆ: ಎಚ್.ಎಸ್. ಮೋನಪ್ಪ

# ಶಾಂತ ಸರೋವರದಲ್ಲಿ ಅನುಮಾನದ ಅಲೆ

ಮರುಮದುವೆಯಾಗುವಂತೆ ಒತ್ತಾಯಿಸತೊಡಗಿದ ಬಾವನೆಂಟನ ಆಗ್ರಹವನ್ನು ಚಿದಾನಂದ ಸ್ಪಷ್ಟ ಮಾತುಗಳಲ್ಲಿ ತಳ್ಳಿಹಾಕಿದ.

‘ಯಾವ ವ್ಯವಸ್ಥೇನೂ ಬೇಡ’

‘ಅಂದ್ರೆ? ಸಿಂಪಲ್ಲಾಗಿ ಮದುವೆ ಆಗೋದು ಅಂತ್ಲಾ?’

‘ಛೇಛೇ, ಹಾಗೆಲ್ಲಾ ಅರ್ಥ ಕಟ್ಬೇಡ. ನಾನು ಸದ್ಯಕ್ಕೆ ಮದುವೆ ಆಗೋ ಯೋಚನೇಲಿಲ್ಲ...’

‘ಸದ್ಯಕ್ಕೆ ಅಂದ್ರೆ?’

‘ಮೂಗಿಗೆ ತುಪ್ಪ ಹಚ್ಚಿ ಕೂರಿಸೋದ್ಯಾಕೆ? ನೇರವಾಗಿ ಹೇಳ್ತೀನಿ. ನಾನು ಮತ್ತೊಂದು ಮದುವೆ ಆಗಲ್ಲ. ಇವಾಗಲ್ಲ, ಯಾವತ್ತೂ’

“ಬಾವ, ಬಂದ ಅವಕಾಶಾನ ಕಾಲಿಂದ ಒದೀಬೇಡಿ. ಎಣ್ಣೆ ಬಂದಾಗ ಕಣ್ಣು ಮುಚ್ಕೊಂಡ್ರು ಅನ್ನೋ ಹಾಗಾಗ್ಬಾರ್ದು...’

‘ಇಲ್ಲ, ನಾನು ತೀರ್ಮಾನ ಮಾಡಿ ಆಗಿದೆ...’

‘ಮಕ್ಕಳ ಮುಖ ನೋಡ್ಕಂಡಾದ್ರೂ’

‘ಮಕ್ಕಳ ಮುಖ ನೋಡ್ಕಂಡೇ ನಾನು ಈ ತೀರ್ಮಾನಕ್ಕೆ ಬಂದಿರೋದು’.

‘ನೋಡಿ ಬಾವ, ಇದು ಬರೀ ಊಟ, ತಿಂಡಿ ಪ್ರಶ್ನೆ ಅಲ್ಲ. ಮನುಷ್ಯನ ಅಗತ್ಯ ಇನ್ನೂ ಏನೇನೋ ಇರುತ್ತೆ’.

